ಅನುದಾನ ಪಡೆಯುತ್ತಿರುವ ಖಾಸಗೀ ಪ್ರೌಢಶಾಲೆಗಳನ್ನು ಸರ್ಕಾರ ವಹಿಸಿಕೊಳ್ಳುವ ಬಗ್ಗೆ

೧೮೩ (೭೧೯) ಶ್ರೀ ಆರ್. ವೆಂಕಟರಾಮಯ್ಯ (ಮುಳಬಾಗಿಲು).—ಮಾನ್ಯ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:—

ಅ) ರಾಜ್ಯದಲ್ಲಿ ಸರ್ಕಾರದಿಂದ ಅನುದಾನ ಪಡೆಯುತ್ತಿರುವ ಖಾಸಗಿ ಪ್ರೌಢಶಾಲೆಗಳನ್ನು ಸರ್ಕಾರ ವಹಿಸಿಕೊಳ್ಳಲು ಉದ್ದೇಶಿಸಲಾಗಿದೆಯೇ ?

ಆ) ಹಾಗಿದ್ದಲ್ಲಿ ಎಷ್ಟು ಶಾಲೆಗಳನ್ನು ಸರ್ಕಾರ ವಹಿಸಿಕೊಳ್ಳಲು ಉದ್ದೇಶಿಸಿದೆ ?

ಇ) ಇದುವರೆಗೂ ಎಷ್ಟು ಶಾಲೆಗಳ ಆಡಳಿತವನ್ನು ಸರ್ಕಾರ ವಹಿಸಿಕೊಂಡಿದೆ ?

ಶ್ರೀ ಎಂ. ಚಂದ್ರಶೇಖರ್ (ಶಿಕ್ಷಣ ಮಂತ್ರಿಗಳು).—

ಅ) ಇಲ್ಲ.

ಆ) ಅನ್ವಯಿಸುವುದಿಲ್ಲ.

ಇ) ೨೩ (ಇಪ್ಪತ್ಮೂರು)

ಶ್ರೀ ಆರ್. ವೆಂಕಟರಾಮಯ್ಯ.—ಸ್ವಾಮಿ, ಮಾನ್ಯ ಚಂದ್ರಶೇಖರ್ ಈ ಡಿಪಾರ್ಟ್‌ಮೆಂಟನ್ನು ಚೆನ್ನಾಗಿ ಕೆಂಟ್ರೋಲ್ ಮಾಡುತ್ತಾರೆಂದು ನಾನು ಅಂದುಕೊಂಡಿದ್ದೆ. ಆದರೆ ಅವರ ಕಂಟ್ರೋಲ್ ತಪ್ಪಿದೆ. ಎಜುಕೇಷನ್ ಡಿಪಾರ್ಟ್‌ಮೆಂಟ್‌ನವರು ಮುಳುಬಾಗಿಲು ತಾಲ್ಲೂಕಿನ ನಂಗಲಿ ಮತ್ತು ಅವಣಿಯಲ್ಲಿರುವ ಪ್ರೌಢಶಾಲೆಗಳನ್ನು ವಹಿಸಿಕೊಳ್ಳಲು ಪ್ರಪೋಸಲ್ ಮಾಡಿದ್ದಾರೆ. ಇನ್ನೂ ಆಜ್ಞೆಯನ್ನು ಕೊಟ್ಟಿಲ್ಲ. ಆದರೆ ರಾಜ್ಯದಲ್ಲಿ ಖಾಸಗಿ ಪ್ರೌಢಶಾಲೆಗಳನ್ನು ಸರ್ಕಾರ ವಹಿಸಕೊಳ್ಳಲು ಉದ್ದೇಶಿಸಲಾಗಿದೆಯೇ ಎಂದರೆ ಇಲ್ಲವೇ ಇಲ್ಲ ಎಂದು ಹೇಳಿದ್ದಾರೆ. ಇದರ ಅರ್ಥ ಏನು ?

ಅಧ್ಯಕ್ಷರು.—ಉತ್ತರ ಹೇಳಿದ್ದಾರೆ, ಸಪ್ಲಿಮೆಂಟರಿ ಪ್ರಶ್ನೆ ಕೇಳಿರಿ.

ಶ್ರೀ ಆರ್. ವೆಂಕಟರಾಮಯ್ಯ.—ನಂಗಲಿ ಮತ್ತು ಅವಣಿ ಹೈಸ್ಕೂಲುಗಳನ್ನು ತೆಗೆದುಕೊಳ್ಳಬೇಕೆಂದು ಸರಕಾರದ ಆರ್ಡರ್ ಆಗಿ, ಆದರಲ್ಲಿ ಸ್ವಲ್ಪ ಟೆಕ್ನಿಕಲ್ ಪ್ರಾಬ್ಲಮ್ ಬಂದು ನಿಂತು ಹೋಗಿದೆ. ಒಂದರಲ್ಲಿ ಜೂನಿಯರ್ ಕಾಲೇಜ್ ಇತ್ತು ಎಂಬ ಕಾರಣಕ್ಕಾಗಿ ಅದು ನಿಂತು ಹೋಗಿದೆ. ಅದನ್ನು ಈಗ ಸಪರೇಟ್ ಮಾಡಿದ್ದೇವೆ. ಆದರೂ ಸಹ ಇದನ್ನು ಪರಿಗಣಿಸದೇ ಅವರು ಕೈಬಿಟ್ಟಿದ್ದಾರೆ. ಹೈಕೋರ್ಟ್ ಆರ್ಡರ್ ಕೊಟ್ಟರೂ ಅದನ್ನು ತೆಗೆದುಕೊಂಡಿಲ್ಲ. ಅವಣಿದು ಪ್ರಪೋಸಲ್ ಇದೆ. ನನಗೆ ತಿಳಿದಹಾಗೆ ಕೋಲಾರ ಜಿಲ್ಲೆಯಲ್ಲಿ ಎರಡು ಖಾಸಗಿ ಅನುದಾನಿತ ಶಾಲೆಗಳು ಇದ್ದರೆ ಕರ್ನಾಟಕ ರಾಜ್ಯದಲ್ಲಿ ಇನ್ನೂ ಎಷ್ಟಿರಬಹುದು ? ಇಪರು ಇಲ್ಲವೆ ಇಲ್ಲ ಎಂದು ಹೇಳುವುದು ಸರಿಯಲ್ಲ. ಆದುದರಿಂದ ಅವುಗಳನ್ನು ಸರಕಾರದವರು ವಹಿಸಿಕೊಳ್ಳಬೇಕು, ವಹಿಸಿಕೊಂಡು ಅವುಗಳನ್ನು ಪುನರಾರಂಭ ಮಾಡಬೇಕೆಂದು ಹೇಳುತ್ತೇನೆ.

ಅಧ್ಯಕ್ಷರು.—ತಾವು ಮತ್ತೊಮ್ಮೆ ಕೇಳುವಿರಂತೆ ಕುಳಿತುಕೊಳ್ಳಿ. ಮಂತ್ರಿಗಳು ಉತ್ತರ ಹೇಳಲಿ.

ಶ್ರೀ ಎಂ. ಚಂದ್ರಶೇಖರ್.—ಅಧ್ಯಕ್ಷರೇ, ಖಾಸಗಿ ಅನುದಾನಿತ ಶಾಲೆಗಳನ್ನು ತೆಗೆದುಕೊಳ್ಳುವಂತಹ ಅಗತ್ಯ ಏನಿಲ್ಲ. ಅವರೇ ಪ್ರಾರಂಭ ಮಾಡಲಿ, ಸರಕಾರ ಅನುಕೂಲ ಮಾಡಿಕೊಡುತ್ತದೆ. ಖಾಸಗೀಯವರು ಮಾಡುವುದಕ್ಕೆ ಸರ್ಕಾರ ಅನುದಾನ ಕೊಡುತ್ತದೆ. ಕೆಲವು ಸಂದರ್ಭಗಳಲ್ಲಿ ಖಾಸಗಿಯವರು ಶಾಲೆಗಳನ್ನು ನಡೆಸುವುದಕ್ಕೆ ನಮ್ಮ ಕೈಯಲ್ಲಿ ಆಗುವುದಿಲ್ಲ, ದಯವಿಟ್ಟು ನೀವೇ ತೆಗೆದುಕೊಂಡು ಬಿಡಿ ಎಂದು ಹೇಳುತ್ತಾರೆ. ಶಾಲೆಯನ್ನು ಮುಂಜೂರು ಮಾಡಿಸಿಕೊಳ್ಳುವಾಗ ಅವರಿಗೆ ಇರುವ ಮುತುವರ್ಜಿ ಮುಂದೆ ಅದನ್ನು ನಡೆಸುವ ಕಾಲದಲ್ಲಿ ಇರುವುದಿಲ್ಲ. ಅನೇಕ ಖಾಸಗಿ ಸಂಸ್ಥೆಗಳವರು ಶಾಲೆಗಳನ್ನು ಏತಕ್ಕೋಸ್ಕರ ತೆರೆಯುತ್ತಾರೆ ಎನ್ನುವುದರ ಬಗ್ಗೆ ಅನೇಕ ಸಂದರ್ಭದಲ್ಲಿ ಈ ಮನೆಯಲ್ಲಿ ಚರ್ಚೆಯಾಗಿದೆ.

ಶ್ರೀ ಆರ್. ವೆಂಕಟರಾವಯ್ಯ.—ವ್ಯಾಪಾರಕ್ಕಾಗಿ.

ಶ್ರೀ ಎಂ. ಚಂದ್ರಶೇಖರ್.—ಖಾಸಗಿಯವರು ಶಾಲೆಗಳನ್ನು ಪ್ರಾರಂಭಮಾಡಿ ಮುಂದೆ ನಮ್ಮ ಕೈಯಲ್ಲಿ ಆಗುವುದಿಲ್ಲ, ಸರಕಾರ ಪಹಿಸಿಕೊಳ್ಳಲಿ ಎಂದು ಹೇಳುತ್ತಾರೆ. ಸರಕಾರಕ್ಕೆ ಎಲ್ಲವನ್ನೂ ತೆಗೆದು ಕೊಳ್ಳುವುದಕ್ಕೆ ಆಗುವುದಿಲ್ಲ. ಕೆಲವು ನಿಯಮಗಳು ಇವೆ ಆ ನಿಯಮಗಳು ಪಾಲನೆ ಆಗಿವೆಯೋ ಇಲ್ಲವೇ ಎಂಬುದನ್ನು ನೋಡಿ,ಪರಿಶೀಲನೆ ಮಾಡಿ, ವಿದ್ಯಾರ್ಥಿಗಳ ಹಿತ ದೃಷ್ಟಿಯಿಂದ ಮತ್ತು ಅಲ್ಲಿ ನೇಮಕಗೊಂಡಿರತಕ್ಕ ಶಿಕ್ಷಕರ ಹಿತದೃಷ್ಟಿಯಿಂದ ನಾವು ತೆಗೆದುಕೊಳ್ಳಬೇಕಾಗಿ ಬರುತ್ತದೆ ಆ ನಿಯಮಗಳು ಏನು ಎಂಬುದನ್ನು ನಿಮ್ಮ ಗಮನಕ್ಕೆ ಬಾದಿರಬಹುದು. ಸರಕಾರ ಶಾಲೆಗಳನ್ನು ತೆಗೆದುಕೊಳ್ಳಬೇಕಾದರೆ, ಅವು ಅನುದಾನಿತ ಶಾಲೆಗಳಾಗಿರಬೇಕು, ಕಟ್ಟಡಗಳನ್ನು ಹೊಂದಿರಬೇಕು, ಆಟದ ಮೈದಾನಗಳನ್ನು ಹೊಂದಿರಬೇಕು ಎಂಬ ಇನ್ನೂ ಕೆಲವಾರು ನಿಯಮಗಳು ಇವೆ. ಅವೆಲ್ಲಾ ಇರಬೇಕು. ಇನ್ನು ಅಲ್ಲಿ ನೇಮಕ ಮಾಡಿಕೊಂಡಿರುವುದರಲ್ಲಿ ರೋಸ್ಟರ್ ಪದ್ಧತಿಯನ್ನು ಅನುಸರಿಸಿರ ಬೇಕು. ಇವೆಲ್ಲಾ ಸರಿಯಾಗಿರಬೇಕು ಹೀಗೆಲ್ಲಾ ಇದ್ದು, ನಮ್ಮ ಕೈಯಲ್ಲಿ ಆ ಶಾಲೆಯನ್ನು ನಡೆಸುವುದಕ್ಕೆ ಆಗುವುದಿಲ್ಲ ಎಂದಾಗ ವಿದ್ಯಾರ್ಥಿಗಳ ಹಾಗೂ ಶಿಕ್ಷಕರ ಹಿತದೃಷ್ಟಿಯಿಂದ ನಾವು ಪಹಿಸಿ ಕೊಳ್ಳಬೇಕಾಗುತ್ತದೆ. ನೀವು ಹೇಳಿರುವ ಎರಡರಲ್ಲಿ ಅಷ್ಟು ನಿಯಮಗಳು ಪಾಲನೆ ಆಗಿವೆಯೋ ಇಲ್ಲವೋ ಗೊತ್ತಿಲ್ಲ.

ಶ್ರೀ ಆರ್. ವೆಂಕಟರಾಮಯ್ಯ.—ನಾವು ರಿಜಿಸ್ಟರ್ ಮಾಡಿಕೊಟ್ಟುಬಿಟ್ಟಿದ್ದೇವೆ. ಒಂದರಲ್ಲಿ ಜೂನಿಯರ್ ಕಾಲೇಜು ಇತ್ತು ಎಂದು ಡಿನೋಟಿಫೈ ಮಾಡಿದರು. ಅಲ್ಲಿ ಜೂನಿಯರ್ ಕಾಲೇಜು ಇಲ್ಲ, ಸಪರೇಟ್ ಸಂಸ್ಥೆಯಾಗಿದೆ ಎಂದು ಹೇಳಿದ್ದೇವೆ: ಅದನ್ನು ತೆಗೆದುಕೊಳ್ಳುವುದು ಒಂದು ನಾವು ಹುಡುಗರನ್ನು ಮಾತ್ರ ಕೊಟ್ಟಿಲ್ಲ, ಹುಡುಗರ ಜೊತೆಗೆ ಬಿಲ್ಡಿಂಗ್. ಆಟದ ಮೈದಾನ ಎಲ್ಲಾ ಕೊಟ್ಟಿದ್ದೇವೆ. ಆದ್ದರಿಂದ ದಯವಿಟ್ಟು ಇದನ್ನು ತೆಗೆದುಕೊಳ್ಳಬೇಕೆನ್ನತಕ್ಕಂಥಾದ್ದು ಒಂದು. ಇನ್ನು ಸರಕಾರದವರು ಪಂಡ್ರೆಡ್‌ಪರ್ಸೆಂಟ್ ಗ್ರ್ಯಾಂಟ್ ಕೊಡುತ್ತಾರೆ. ಅವರು ಅನುದಾನ ಎಲ್ಲಾ ತೆಗೆದುಕೊಂಡು ಆಮೇಲೆ ನೀವು ತೆಗೆದುಕೊಳ್ಳಿ ಎಂದು ಹೇಳುತ್ತಾರೆ. ನೀವು ಹೇಳಿದರೀತಿ ವ್ಯಾಪಾರಿ ಸಂಸ್ಥೆ ಮಟ್ಟಕ್ಕೆ ಬಂದಿರುತ್ತದೆ. ಐವತ್ತೂರು ರೂಪಾಯಿ ಫೀಜ್ ಒಂದಕ್ಕೆ ನಾಲ್ಕರಷ್ಟು ಬಿಲ್ಡಿಂಗ್ ಫಂಡ್, ಎಲ್ಲಾ ತೆಗೆದುಕೊಳ್ಳುತ್ತಾರೆ. ಆದನ್ನು ತಪ್ಪಿಸುವುದಕ್ಕೆ. ನೀವು ಡೈರೆಕ್ಟೇವ್ ಪ್ರಿನ್ಸಿಪಲ್ಸ್ ಪ್ರಕಾರ ೧ ರಿಂದ ೭ನೇ ತರಗತಿಯವರೆಗೆ ಕಂಪಲ್ಸರಿ ಎಜುಕೇಷನ್ ಆಕ್ಟ್ ಏನು ತಂದಿದ್ದೀರಿ, ಆದರ ಪ್ರಕಾರ ಎಲ್ಲಾ ಶಾಲೆಗಳನ್ನೂ ನೀವೇ ತೆಗೆದುಕೊಂಡು ನಡೆಸಿದರೆ ಶೋಷಣೆ ತಪ್ಪುವುದಿಲ್ಲವೇ ? ಅದಕ್ಕೆ ಒಂದು ಡೈರೆಕ್ಷೆನ್ ಕೊಡುತ್ತೀರಾ ? ಒಳ್ಳೆಯ ಸ್ಕೂಲ್ ಇದ್ದರೆ ತೆಗೆದುಕೊಳ್ಳಿ, ನಷ್ಟ ಇಲ್ಲ, ಪಬ್ಲಿಕ್‌ಗೆ ಮತ್ತು ಸ್ಟೂಡೆಂಟ್ಸ್‌ಗೆ ಸಹಾಯ ಮಾಡಿದಹಾಗೆ ಆಗುತ್ತದೆ, ಇಲ್ಲದೇ ಹೋದರೆ ಅವರು ವಿಪರೀತ ಫೀಜ್ ಹಾಕುತ್ತಾರೆ. ಹೇಳದೇ ಕೇಳದೇ, ರಸೀತಿ ಕೊಡದೆ ಫೀಜ್ ವಸೂಲು ಮಾಡುತ್ತಾರೆ. ಬೇಕಾದಷ್ಟು ದುಡ್ಡು ವಸೂಲು ಮಾಡುತ್ತಾರೆ. ಅದಕೋಸ್ಕರ ನೀವೆ ಈ ಶಾಲೆಗಳನ್ನು ತೆಗೆದು ಕೊಳ್ಳಬೇಕೆಂದು ಪ್ರಾರ್ಥಿಸುತ್ತೇನೆ. ಇನ್ನು ಮುಳುಬಾಗಿಲ್ ತಾಲೂಕಿನ ಎರಡು ಸ್ಕೂಲ್ಸ್ ಏನಿವೆ ಇದನ್ನು ಸಹ ತೆಗೆದುಕೊಳ್ಳುವುದಕ್ಕೆ ತಾವು ಒಪ್ಪಿಕೊಳ್ಳಬೇಕೆಂದು ಹೇಳುತ್ತೇನೆ. ನಾವೆ ನು ನಿಯಮ ಗಳನ್ನು ಹಾಕಿದ್ದೀರಿ ಅದೆಲ್ಲಾ ಫುಲ್‌ಫಿಲ್ ಆಗಿವೆ, ಆದುದರಿಂದ ಅವುಗಳನ್ನು ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ.

ಶ್ರೀ ಎಂ. ಚಂದ್ರಶೇಖರ್.—ಮಾನ್ಯ ಅಧ್ಯಕ್ಷರೇ, ನಾನು ಹೇಳಿದ ನಿಯಮಗಳನ್ನು ಅವರು ಪೂರ್ಣವಾಗಿ ಪಾಲಿಸಿದ್ದಾರೆಂದು ಮಾನ್ಯ ಸದಸ್ಯರು ಹೇಳುತ್ತಿದ್ದಾರೆ. ಆ ಬಗ್ಗೆ ನಾನು ನೋಡುತ್ತೇನೆ. ಇನ್ನು ನೀತಿಯ ಬಗ್ಗೆ ಹೇಳಿದ್ದಾರೆ. ಪ್ರಾಥಮಿಕ ಶಾಲೆ ಮಟ್ಟದಲ್ಲಿ ಕಡ್ಡಾಯ ಶಿಕ್ಷಣ ೧ಳ ವರ್ಷದವರೆಗೂ ಕೊಡಬೇಕೆನ್ನುವುದನ್ನು ಸಹ ಹೇಳಿದ್ದಾರೆ. ಖಾಸಗಿ ಶಿಕ್ಷಣ ಸಂಸ್ಥೆಗಳಿಗೂ ಕೂಡ ಉತ್ತೇಜನ ಕೊಡಬೇಕೆನ್ನುವ ದೃಷ್ಟಿಯಿಂದ ಸರ್ಕಾರ ಆ ರೀತಿ ಮಾಡಿದೆ. ಆದರೆ ಕೆಲವಾರು ಸಂಸ್ಥೆಗಳು ಸರಿಯಾದ ರೀತಿಯಲ್ಲಿ ನಡೆಸಿಕೊಂಡು ಬರದೆ ಇದ್ದಾಗ ಆ ಸಂಸ್ಥೆಗಳನ್ನು ಸರ್ಕಾರ ವಹಿಸಿಕೊಳ್ಳಲು ಸಾಧ್ಯವಿಲ್ಲ. ಯಾವ ಶಾಲೆಗಳು ಸರ್ಕಾರದ ನಿಯಮಗಳನ್ನು ಪಾಲನೆ ಮಾಡಿರುತ್ತವೆಯೋ ಅಂತಹ ಶಾಲೆಗಳನ್ನು ಮಾತ್ರ ವಿಧಿಯಲ್ಲದೆ ಸರ್ಕಾರ ತೆಗೆದುಕೊಳ್ಳ ಬೇಕಾಗುತ್ತದೆ.

ಅಧ್ಯಕ್ಷರು.—ಈಗ ಮಾನ್ಯ ಅರಣ್ಯ ಸಚಿವರು ಶ್ರೀ ಬಿ. ಸ್ವಾಮಿರಾವ್‌ರವರ ಪ್ರಶ್ನೆಗೆ ಉತ್ತರ ಕೊಡಬಹುದು.

ಶ್ರೀ ಬಿ. ರಾಚಯ್ಯ.—ಕಾಪಿ ಇನ್ನೂ ಬಂದಿಲ್ಲ. ಉತ್ತರ ಕೊಡಿ ಎಂದರೆ ಕೊಡುತ್ತೇನೆ.

ಶ್ರೀ ಬಿ. ಸ್ವಾಮಿರಾವ್.—ಆದು ಯಾವ ತರಹ ಆಗುತ್ತದೆ. ನಾವು ಕಳುಹಿಸಿದ ಪ್ರಶ್ನೆಗಳೆಲ್ಲಾ ಈ ರೀತಿ ಆಗುತ್ತಿವೆ. ಇನ್ನು ಅಸೆಂಬ್ಲಿ ಅಧಿವೇಶನ ಇರುವುದು ೨–೩ ದಿವಸಗಳು ಮಾತ್ರ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಅವರೇನು ಉತ್ತರ ಕೊಡುತ್ತಾರೆ ಏನ್ನುವುದನ್ನು ನೆನಪು ಇಟ್ಟುಕೊಳ್ಳುವುದಕ್ಕೆ ನಾವುಗಳು ಕಂಪ್ಯೂಟರ್ ಏನು ?

ಅಧ್ಯಕ್ಷರು.—ರಾಚಯ್ಯನವರೇ ತಾವು ಸೀನಿಯರ್ ಮಿನಿಸ್ಟರ್. ಡಿಪಾರ್ಟ್‌ಮೆಂಟ್‌ನಿಂದ ಉತ್ತರವನ್ನು ನಿನ್ನೆ ತರಿಸಿಬೇಕಾಗಿತ್ತು.

ಶ್ರೀ ಬಿ.ರಾಚಯ್ಯ.—ನಿನ್ನೆ ರಜೆ ಇತ್ತು.

ಅಧ್ಯಕ್ಷರು.—ಮೊನ್ನೆ ತರಿಸಬೇಕಾಗಿತ್ತು.

ಶ್ರೀ ಬಿ. ರಾಚಯ್ಯ.—ಕಾಪಿ ಬಂತು.

ಅಧ್ಯಕ್ಷರು.—ಮೊನ್ನೆ ತಾವು ಉತ್ತರ ತರಿಸಿಕೊಂಡಿದ್ದರೆ ತಾವು ಸಹ ಒಂದು ಸಾರಿ ನೋಡಿ ಓದಿಕೊಂಡು ಉತ್ತರ ಕೊಡಬಹುದು.

ಶ್ರೀ ಬಿ. ರಾಚಯ್ಯ.—ಸರಿ ಮಾಡೋಣ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ನೋಡಿ ಸರ್ಕಾರ ಹೇಗಿದೆ ?

ಅಧ್ಯಕ್ಷರು.—ನಿಮ್ಮ ಕಾಲದಿಂದಲೂ ಸಹ ಸಿಬ್ಬಂದಿಗೆ ಈ ಅಲರ್ಜಿ ಇದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ನಿಮ್ಮ ಕಾಲದಿಂದ ಅಂದರೆ.....

ಅಧ್ಯಕ್ಷರು.—ನಾವು ನೀವು ಮಂತ್ರಿಗಳಾಗಿದ್ದ ಕಾಲದಿಂದಲೂ ಸಿಬ್ಬಂದಿಗೆ ಈ ಅಲರ್ಜಿ ಇದೆ. ಹೋಗಲಿ, ಈಗ ಪ್ರಶ್ನೆಗೆ ಉತ್ತರ ಕೊಡಿ.

ಶಿವಮೊಗ್ಗೆಯಲ್ಲಿ ಕಾಡಾನೆಗಳ ಹಾವಳಿ

೧೭೫೫ (೫೫೪) ಶ್ರೀ ಬಿ. ಸ್ವಾಮಿರಾವ್ (ಹೊಸನಗರ).—ಮಾನ್ಯ ಅರಣ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ:—

ಅ) ಶಿವಮೊಗ್ಗ ಜಿಲ್ಲೆಯಲ್ಲಿ ಕಳೆದ ೩ ವರ್ಷಗಳಲ್ಲಿ ಕಾಡಾನೆ ತುಳಿತಕ್ಕೆ ಎಷ್ಟು ಜನ ಬಲಿಯಾಗಿದ್ದಾರೆ ?

ಆ) ಆ ಪೈಕಿ ಎಷ್ಟು ಮಂದಿಗೆ ಪರಿಹಾರ ಕೊಡಲಾಗಿದೆ ?

ಇ) ಹೊಸನಗರ ತಾಲ್ಲೂಕು ಅರಸಾಳಿನಲ್ಲಿ ಕಾಡಾನೆ ಹಾವಳಿ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಈ) ಹಾಗಿದ್ದರೆ ಈ ಹಾವಳಿಯನ್ನು ತಡೆಯಲು ಸರ್ಕಾರ ತೆಗೆದುಕೊಂಡ ಕ್ರಮವೇನು ?

ಶ್ರೀ ಆರ್. ಎನ್. ನಾಯಕ್ (ಅರಣ್ಯ ಮಂತ್ರಿಗಳು).—

ಅ) ೧೯೮೬–೮೭ ರಿಂದ ೧೯೮೮–೮೯ರ ಇಲ್ಲಿಯವರೆವಿಗೆ ಒಟ್ಟು ನಾಲ್ಕು ಜನ ಆನೆ ತುಳಿತಕ್ಕೆ ಬಲಿಯಾಗಿದ್ದಾರೆ.

ಆ) ಮೇಲ್ಕಂಡ ಎಲ್ಲಾ ಪ್ರಕರಣಗಳಿಗೂ ಪರಿಹಾರವನ್ನು ಮಂಜೂರು ಮಾಡಲಾಗಿದೆ.

ಇ) ಬಂದಿದೆ.